ಗೋಪಿದಂಡೆ (ಆರ್ಕಿಡ್ಸ್) ಅರಳಲು ಪ್ರಾರಂಭಿಸಿದರೆ ಮಳೆಗಾಲ ಹತ್ತಿರವಿದೆ ಎಂದೇ ಅರ್ಥ. ಅಡಿಕೆ ತೋಟದಲ್ಲಿ, ಬೆಟ್ಟಗಳಂಚಿನ ಪೊದೆಗಳಲ್ಲಿ ಜೀರುಂಡೆಗಳ ಲಯಭರಿತ ಸಮೂಹ ಗಾನ ತೀವ್ರವಾಯಿತೆಂದರೆ ಮಳೆರಾಯನನ್ನು ಕರೆಯುತ್ತಿವೆ ಎಂದು ತಿಳಿಯಬೇಕು. ಒಂದೆರಡು ಮಳೆ ಬಿದ್ದೊಡನೆ ಹಳ್ಳ, ಹೊಂಡಗಳಲ್ಲಿರುವ ಕಪ್ಪೆಗಳು ರಾತ್ರಿ ಪೂರ್ತಿ ವಟ ಗಾಯನ ಶುರು ಮಾಡಿ ಮಳೆಗಾಲದ ಆರಂಭವನ್ನು ದೃಢೀಕರಿಸುತ್ತವೆ.

ಮುಂಗಾರು ಪೂರ್ವ ಮಳೆಯು ಗುಡುಗು– ಸಿಡಿಲುಗಳ ಹಿಮ್ಮೇಳಗಳೊಂದಿಗೆ ಆಗಮಿಸಿ ಎಲ್ಲರಲ್ಲೂ ಭಯ ಹುಟ್ಟಿಸಿ, ಇಳೆಯಲ್ಲಿ ಹಸಿರು ಜನಿಸುವಂತೆ ಮಾಡಿಬಿಡುತ್ತದೆ. ಮೊದಲ ಮಳೆ ಹನಿಯ ನೀರು ಉಂಡೊಡನೆ ಭೂಮಿಯೊಡಲಲ್ಲಿ ಅವಿತು ನಿದ್ದೆ ಹೋದ ಗಡ್ಡೆಗಳೆಲ್ಲ ಎಚ್ಚರಾಗಿ ಚಿಗುರಿ ಹೂವರಳಿಸಿ ಬಿಡುತ್ತವೆ. ಬೇಸಿಗೆಯಲ್ಲಿ ನಾವೆಷ್ಟೇ ನೀರುಣಿಸಿದರೂ ಮಿಸುಕಾಡದ ಅವಕ್ಕೆ ಮಳೆ ನೀರು ಯಾವುದೆಂದು ತಕ್ಷಣ ಗೊತ್ತಾಗಿಬಿಡುತ್ತದೆ. ಜಾನುವಾರುಗಳಿಗೆ ಕಚ್ಚುವ ದೊಡ್ಡ ನೊಣಗಳು (ಮಲೆನಾಡಲ್ಲಿ ಕುರುಡು ನೊಣ ಎನ್ನುತ್ತಾರೆ) ಬೆಟ್ಟಗಳಲ್ಲಿ ಪ್ರತ್ಯಕ್ಷವಾಗಿ ಗುಂಯ್‌ಗುಡುತ್ತ ದನ, ಎಮ್ಮೆಗಳ ನಿರೀಕ್ಷೆಯಲ್ಲೇ ಹಾರಾಡ ತೊಡಗುತ್ತವೆ. ಸಹಸ್ರಪದಿ ಕೀಟಗಳು (ಚೊರಟೆ) ಅಲ್ಲಲ್ಲಿ ರೈಲಿನಂತೆ ಸಂಚರಿಸತೊಡಗುತ್ತವೆ.

ಮಳೆಯ ಆಗಮನ ಎಷ್ಟೊಂದು ಜೀವಿಗಳಿಗೆ ಚೈತನ್ಯ ತುಂಬುತ್ತದೆ! ಒಂದು ಮಳೆಗಾಗಿ ಅವೆಲ್ಲ ಅಡಗಿ ಕುಳಿತಿರುವುದೇ ವಿಸ್ಮಯ.



